**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) ರವರು ನಿಯಮ-330 ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ಗಮನ ಸೆಳೆಯುವ ಸೂಚನೆ:**

**ಕರ್ನಾಟಕ ಕರಾವಳಿಯಲ್ಲಿ ವಿಶೇಷವಾಗಿ ಗುರುತಿಸಿಕೊಂಡಿರುವ ಹೆಂಚು ಉದ್ಯಮ ತೀವ್ರ ಕುಸಿತ ಕಂಡು ಮಾಲೀಕರು ಸಂಕಷ್ಟದಲ್ಲಿದ್ದಾರೆ. ರಾಜ್ಯದ ಉಡುಪಿ ಹಾಗೂ ಮಂಗಳೂರು ಜಿಲ್ಲೆಯಲ್ಲಿ ವಿಶೇಷವಾಗಿ ಆವೆ ಮಣ್ಣಿನ ಹೆಂಚು ನಿರ್ಮಾಣಗೊಳ್ಳುತ್ತಿದ್ದು, ಸದರಿ ಹೆಂಚುಗಳ ಖರೀದಿ ಕ್ಷೀಣಿಸುವುದರ ಜೊತೆಗೆ ಕಚ್ಚಾ ವಸ್ತುಗಳ ಅಲಭ್ಯತೆಗೆ, ದರ ಏರಿಕೆ, ಕಚ್ಚಾ ವಸ್ತುಗಳಿಗೆ ಇನ್‌ಪುಟ್ ಕ್ಲೈಮ್ ಇಲ್ಲದಿರುವುದು, ಆವೆ ಮಣ್ಣು ದರ ಹೆಚ್ಚಳ, ಆವೆ ಮಣ್ಣು ತೆಗೆಯಲು ಇರುವ ಕಾನೂನು ಕಟ್ಟಳೆಗಳು, ಗಗನಕ್ಕೇರಿರುವ ಡೀಸೆಲ್ ಮತ್ತು ಕಟ್ಟಿಗೆ ಧಾರಣೆ, ಶೇ.12 ರಷ್ಟು ಜಿ.ಎಸ್.ಟಿ ಹಾಗೂ ಇನ್ನೂ ಮುಂತಾದ ಸಮಸ್ಯೆಗಳಿಂದ ಈ ವ್ಯಾಪ್ತಿಯಲ್ಲಿನ ಹೆಂಚಿನ ಕಾರ್ಖಾನೆಗಳು ಮುಚ್ಚುವ ಹಂತ ತಲುಪಿರುವ ಗಂಭೀರ ಸಮಸ್ಯೆ ಕುರಿತು ಮಾನ್ಯ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರ ಗಮನವನ್ನು ಸೆಳೆಯಲು ಬಯಸುತ್ತೇನೆ.**

**ಉತ್ತರ:**

**ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಂಚಿನ ಕಾರ್ಖಾನೆಗಳ ಸ್ಥಿತಿಗತಿಗಳ ಬಗ್ಗೆ:**

1. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಂಚಿನ ಉದ್ಯಮ ಸುಮಾರು 100 ವರ್ಷಗಳಷ್ಟು ಹಿಂದೆ ಪ್ರಾರಂಭವಾಗಿದ್ದು, ಒಟ್ಟು 27 ಕಾರ್ಖಾನೆಗಳು ಕಾರ್ಯ ನಿರ್ವಹಿಸುತ್ತಿದ್ದವು.
2. ಈ ಕಾರ್ಖಾನೆಗಳು ಕಚ್ಚಾವಸ್ತು / ಉತ್ಪನ್ನಗಳನ್ನು ಜಲಮಾರ್ಗದ ಮೂಲಕ ಸಾಗಾಣಿಕೆಗೆ ಅನುಕೂಲವಾಗುವಂತೆ ನದಿ / ಸಮುದ್ರ ತಟದಲ್ಲಿ ಅಥವಾ ಕಚ್ಚಾವಸ್ತು ಲಭ್ಯತೆ ಇರುವ ಸ್ಥಳದ ಸಮೀಪ ಸ್ಥಾಪನೆಯಾಗಿರುತ್ತವೆ.
3. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಸಕ್ತ 10 ಕಾರ್ಖಾನೆಗಳು ಮಾತ್ರ ಕಾರ್ಯ ನಿರ್ವಹಿಸುತ್ತಿವೆ.
4. ಉಳಿದ ಕಾರ್ಖಾನೆಗಳು ಮುಚ್ಚಿದ್ದು, ಸದರಿ ಜಾಗದಲ್ಲಿ ಇತರ ವಾಣಿಜ್ಯ / ಪ್ರವಾಸೋದ್ಯಮ ಚಟುವಟಿಕೆಗಳು ಪ್ರಾರಂಭವಾಗಿವೆ.
5. ಕಾರ್ಯನಿರ್ವಹಿಸುತ್ತಿರುವ ಕಾರ್ಖಾನೆಗಳು ಹೆಂಚಿನ ಜೊತೆಗೆ ಇಟ್ಟಿಗೆ ಮುಂತಾದ ಉತ್ಪನ್ನಗಳನ್ನು ತಯಾರಿಸುತ್ತಿವೆ.

**ಕಾರ್ಖಾನೆಗಳು ಮುಚ್ಚಲು ಮುಖ್ಯ ಕಾರಣಗಳು :**

1. ಈ ಹಿಂದೆ ಹೆಂಚಿನ ಮನೆಗಳನ್ನು ಕಟ್ಟುತ್ತಿದ್ದು, ಪ್ರಸಕ್ತ RCC ಮೇಲ್ಛಾವಣಿಯ ಮನೆಗಳನ್ನು ಕಟ್ಟುತ್ತಿರುವುದರಿಂದ, ಹೆಂಚುಗಳಿಗೆ ಬೇಡಿಕೆ ಕಡಿಮೆಯಾಗಿರುತ್ತದೆ.
2. ಮಾರುಕಟ್ಟೆಯಲ್ಲಿ ಪರ್ಯಾಯ ಉತ್ಪನ್ನಗಳು ಕಡಿಮೆ ಬೆಲೆಗೆ ಸುಲಭವಾಗಿ ಸಿಗುತ್ತಿರುವುದರಿಂದ, ಹೆಂಚುಗಳಿಗೆ ಬೇಡಿಕೆ ಕಡಿಮೆಯಾಗಿರುತ್ತದೆ. ಉದಾಹರಣೆಗೆ ಶೀಟ್ಸ್, ಸಿಮೆಂಟ್ ಟೈಲ್ಸ್.
3. ಹೆಂಚಿನ ಕಾರ್ಖಾನೆಗಳಿಗೆ ಅಗತ್ಯವಿರುವ ಕಚ್ಚಾವಸ್ತು ಆವೆ ಮಣ್ಣಿನ ಲಭ್ಯತೆಯೂ ಕಡಿಮೆಯಾಗಿರುತ್ತದೆ. ಹೆಂಚಿನ ಕಾರ್ಖಾನೆಗಳ ಸಮೀಪವಿದ್ದ ಆವೆ ಮಣ್ಣಿನ ಜಾಗಗಳು ಪ್ರಸಕ್ತ ಕೈಗಾರಿಕಾ ಪ್ರದೇಶಗಳಾಗಿ, ಮನೆ ನಿವೇಶನಗಳಾಗಿ ಅಥವಾ ಇನ್ನಿತರ ರೀತಿಯಲ್ಲಿ ಅಭಿವೃದ್ಧಿ ಹೊಂದಿರುತ್ತವೆ. ಇದರಿಂದಾಗಿ ಕಚ್ಚಾವಸ್ತುವಿಗಾಗಿ ದೂರದ ಪ್ರದೇಶಗಳಿಗೆ ಹೋಗಬೇಕಾಗಿರುತ್ತದೆ. ಇದರಿಂದ ಕಚ್ಚಾವಸ್ತುವಿನ ವೆಚ್ಚವೂ ಜಾಸ್ತಿಯಾಗಿ ಉತ್ಪಾದನಾ ವೆಚ್ಚವೂ ಹೆಚ್ಚಾಗಿರುತ್ತದೆ.
4. ಅಲ್ಲದೇ, ಸಮೀಪದ ಕೇರಳ ರಾಜ್ಯದಲ್ಲಿ ಆವೆ ಮಣ್ಣನ್ನು ತೆಗೆಯುವುದನ್ನು ನಿರ್ಬಂಧಿಸಿದ್ದು, ಅಲ್ಲಿನ ಹೆಂಚಿನ ಉದ್ಯಮಗಳು ಕಚ್ಚಾವಸ್ತುವಿಗಾಗಿ ದಕ್ಷಿಣ ಕನ್ನಡ ಜಿಲ್ಲೆಯನ್ನೇ ಅವಲಂಭಿಸಿವೆ. ಇದರಿಂದಾಗಿ ಸ್ಪರ್ಧೆ ಹೆಚ್ಚಾಗಿ ಕಚ್ಚಾವಸ್ತು ಬೆಲೆ ಇನ್ನಷ್ಟು ಹೆಚ್ಚಾಗುತ್ತಿದೆ.
5. ಆವೆ ಮಣ್ಣನ್ನು ತೆಗೆಯುವುದು ಗಣಿ ಚಟುವಟಿಕೆಯಲ್ಲಿ ಬರುತ್ತಿದ್ದು, ಸಣ್ಣ ಸಣ್ಣ ಖಾಸಗಿ ಜಾಗದಲ್ಲಿ ಮಣ್ಣನ್ನು ತೆಗೆಯುವಾಗ ಪರವಾನಿಗೆ ಇತ್ಯಾದಿ ಕೆಲಸಗಳಿಗೂ ವೆಚ್ಚ ಹಾಗೂ ಸಮಯವೂ ವ್ಯಯವಾಗುತ್ತಿದೆ.
6. ಹೆಂಚುಗಳಿಗೆ ಈ ಹಿಂದೆ 5% ಜಿ.ಎಸ್.ಟಿ. ವಿಧಿಸಲಾಗುತ್ತಿದ್ದು, ಪ್ರಸಕ್ತ 12% ಜಿ.ಎಸ್.ಟಿ. ವಿಧಿಸಲಾಗುತ್ತಿದೆ. ಇದು ಸಹ ಮಾರುಕಟ್ಟೆಯಲ್ಲಿ ಸ್ಪರ್ಧಿಸಲು ಅಡಚಣೆಯಾಗಿದೆ.

...2

7. ಕಾರ್ಮಿಕರ ಕೊರತೆ / ಹೆಚ್ಚಿನ ವೇತನಗಳೂ ಸಹ ಹೆಂಚು ಕಾರ್ಖಾನೆಗಳಿಗೆ ದುಬಾರಿಯಾಗಿ ಪರಿಣಮಿಸಿವೆ.
8. ಇನ್ನೊಂದು ಮುಖ್ಯ ಕಾರಣವೆಂದರೆ, ಈ ಹೆಂಚಿನ ಕಾರ್ಖಾನೆಗಳು seasonal ಉದ್ಯಮಗಳಾಗಿದ್ದು, ಮಳೆಗಾಲದಲ್ಲಿ 4-5 ತಿಂಗಳುಗಳು ಕಾರ್ಯ ನಿರ್ವಹಿಸಲು ಸಾಧ್ಯವಾಗುವುದಿಲ್ಲ. ಆದರೆ ಈ ಅವಧಿಯ ಕಾರ್ಮಿಕ ವೇತನ, ಸಾಲದ ಕಂತು, ವಿದ್ಯುತ್ ಚ್ಛಕ್ತಿ ಬಿಲ್ಲು ಇತ್ಯಾದಿ ಹೆಚ್ಚುವರಿ ಹೊರೆಯಾಗಿರುತ್ತದೆ.
9. ಹೊಸ ತಲೆಮಾರಿನವರು ಈ ಹೆಂಚಿನ ಉದ್ಯಮಕ್ಕೆ ಬರಲು ಮನಸ್ಸು ಮಾಡುತ್ತಿಲ್ಲ

**ಉದ್ಯಮಿಗಳು ಸರ್ಕಾರದಿಂದ ಬಯಸುತ್ತಿರುವುದು :**

1. ಕೈಗಾರಿಕೆಗಳಿಗೆ ಹಣಕಾಸಿನ ನೆರವು ಮತ್ತು ಸಹಾಯಧನ ಒದಗಿಸುವುದು.
2. ವಿದ್ಯುಚ್ಛಕ್ತಿಯನ್ನು ರಿಯಾಯಿತಿ ದರದಲ್ಲಿ ನೀಡುವುದು.
3. ಟೈಲ್ಸ್ ಮತ್ತು ಶೋ ಟೈಲ್ಸ್ ಬಳಸುವವರಿಗೆ ಕಟ್ಟಡ ಅಂದರೆ ಮನೆ ಅಥವಾ ವಾಣಿಜ್ಯ ಕಟ್ಟಡಕ್ಕೆ ಸಬ್ಸಿಡಿಗಳನ್ನು ಒದಗಿಸುವುದು.
4. ಹೊಸದಾಗಿ ಸ್ಥಾಪಿಸಲಾದ ಕೈಗಾರಿಕೆಗಳ ಮೇಲೆ 1 ರಿಂದ 5 ವರ್ಷಗಳವರೆಗೆ ತೆರಿಗೆಗಳು ಮತ್ತು ಶುಲ್ಕಗಳ ಮೇಲೆ ವಿನಾಯಿತಿಯನ್ನು ಒದಗಿಸುವುದು.
5. ಮಳೆಗಾಲದಲ್ಲಿ, ಉತ್ಪಾದನಾ ರಹಿತ ಅವಧಿಗೆ 5 ತಿಂಗಳವರೆಗೆ ವಿದ್ಯುತ್ ಬಿಲ್‌ನ ವಿನಾಯಿತಿ ಮತ್ತು ಕಡಿತವನ್ನು ಒದಗಿಸುವುದು ಹಾಗೂ ಇತರೆ ತೆರಿಗೆಗಳ ವಿನಾಯಿತಿ ನೀಡುವುದು.
6. ಮಳೆಗಾಲದಲ್ಲಿ ESI, EPF ಮತ್ತು ಇತರೆ ತೆರಿಗೆಗಳು / ಶುಲ್ಕಗಳ ಪಾವತಿಯ ಮೇಲೆ ವಿನಾಯಿತಿಯನ್ನು ಒದಗಿಸುವುದು
7. ರೂಫಿಂಗ್, ಟೈಲ್ಸ್, ಶೋ ಟೈಲ್ಸ್ ಮತ್ತು ರಿಡ್ಜ್‌ಗಳ ಬಳಕೆಯ ಬಗ್ಗೆ ಸಾರ್ವಜನಿಕರಿಗೆ ಶಿಕ್ಷಣವನ್ನು ಸಾಬೀತುಪಡಿಸುವುದು, ಏಕೆಂದರೆ ಈ ವಸ್ತುಗಳು ಪರಿಸರ ಸ್ನೇಹಿಯಾಗಿರುತ್ತವೆ.
8. ಕಚ್ಚಾ ವಸ್ತುಗಳಾದ ಆವೆ ಮಣ್ಣು ಹಾಗೂ ಉರುವಲುಗಳಿಗೆ ದರ ನಿಗದಿ ಮಾಡುವುದು.

**ಸರ್ಕಾರದ ಕ್ರಮ :**

1. ಈ ಕೈಗಾರಿಕೆಗಳು ಕಾಲ ಕಾಲಕ್ಕೆ ಬದಲಾಗುವ ತಂತ್ರಜ್ಞಾನ ಅಳವಡಿಸಿಕೊಳ್ಳಲು ಅನುಕೂಲವಾಗುವಂತೆ ಕೈಗಾರಿಕಾ ನೀತಿ 2020-25 ರಲ್ಲಿ "ತಂತ್ರಜ್ಞಾನ ಉನ್ನತೀಕರಣಕ್ಕೆ ಕೈಗಾರಿಕೆಗಳು ಪಡೆಯುವ ಸಾಲಕ್ಕೆ ಶೇ 5-6% ಬಡ್ಡಿ ಸಹಾಯಧನವನ್ನು ನೀಡಲಾಗುತ್ತಿದೆ.
2. ಹೊಸ ಕೈಗಾರಿಕಾ ನೀತಿ 2020-25 ರಡಿಯಲ್ಲಿ ಹೊಸ ಬಂಡವಾಳ ಹೂಡಿಕೆಗೆ (ಹೊಸ ಘಟಕ, ವಿಸ್ತರಣಾ ಘಟಕ, ವೈವಿಧ್ಯೀಕರಣ ಘಟಕ, ಆಧುನೀಕರಣ ಘಟಕಕ್ಕೆ) ಒಟ್ಟು ಸ್ಥಿರಾಸ್ತಿಯ ಶೇ.25% ರಿಂದ ಶೇ 35% ರಷ್ಟು ಗರಿಷ್ಟ ರೂ.1.05 ಕೋಟಿ ಬಂಡವಾಳ ಹೂಡಿಕೆ ಸಹಾಯಧನ ನೀಡಲಾಗುತ್ತಿದೆ.
3. ಹೊಸ ಬಂಡವಾಳ ಹೂಡಿಕೆಗೆ ಶೇ.75% ರಿಂದ ಶೇ 100% ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ನೊಂದಣಿ ಶುಲ್ಕ ರಿಯಾಯಿತಿಯನ್ನು ನೀಡಲಾಗುತ್ತಿದೆ.
4. ಭೂ ಪರಿವರ್ತನೆ ಶುಲ್ಕವನ್ನು ಶೇ.75% ರಿಂದ ಶೇ 100% ರಷ್ಟು ಮರು ಪಾವತಿ ಮಾಡಲಾಗುತ್ತಿದೆ.
5. ವಿದ್ಯುತ್ ತೆರಿಗೆ ವಿನಾಯಿತಿಯನ್ನು ಶೇ.100% ಗರಿಷ್ಟ 4 ರಿಂದ 8 ವರ್ಷಗಳವರೆಗೆ ನೀಡಲಾಗುತ್ತಿದೆ.
6. ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಅವು ಬಳಸಿದ ಪ್ರತಿ ಯುನಿಟ್‌ಗೆ ರೂ.1 ರಂತೆ 3 ವರ್ಷಗಳ ಕಾಲ ವಿದ್ಯುತ್ ಸಹಾಯಧನವನ್ನು ನೀಡಲಾಗುತ್ತಿದೆ.

ಇನ್ನುಳಿದ ಬೇಡಿಕೆಗಳು ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಿಸಿರುವುದರಿಂದ ಅವುಗಳೊಂದಿಗೆ ಚರ್ಚಿಸಿ ಪರಿಹರಿಸಲು ಮತ್ತು ಮುಂದಿನ ಕೈಗಾರಿಕಾ ನೀತಿಯಲ್ಲಿ ಅಳವಡಿಸುವ ಬಗ್ಗೆ ಕ್ರಮವಹಿಸಲಾಗುವುದು.

**ಸಿಐ 241 ಸಿಎಸ್ ಸಿ 2023**

**(ಶರಣಬಸಪ್ಪ ದರ್ಶನಾಪೂರ)**
ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ
ಉದ್ದಿಮೆಗಳ ಸಚಿವರು